

# ‘ಕಲಾತಪಸ್ವಿ’ಗೆ ಫಾಲ್ಕೆ ಗರಿ

**ಸೂತ್ರಬದ್ಧ ಸಿನಿಮಾಗಳು ಅಬ್ಬರಿಸಲು ಆರಂಭಿಸಿದ ಕಾಲಘಟ್ಟದಲ್ಲಿ ನಿರ್ದೇಶಕ ಕೆ.ವಿಶ್ವನಾಥ್ ಅದ್ಭುತ ಎನ್ನಬಹುದಾದ ಕಲಾತ್ಮಕ ಚಿತ್ರಗಳನ್ನು ರೂಪಿಸಿ ಗೆದ್ದದ್ದು ತೆಲುಗು ಚಿತ್ರರಂಗದ ಬಹುದೊಡ್ಡ ಸಾಹಸಗಾಥೆ.**

■ **ಎನ್. ಉದಯಕುಮಾರ್**

**ಕೆ.** ವಿಶ್ವನಾಥ್ ಹೆಸರಿನ ಮುಂದೆ ‘ಕಲಾತಪಸ್ವಿ’ ಎಂಬ ವಿಶೇಷಣವೊಂದು ಸೇರಿಕೊಂಡಿದೆ. ನಮ್ಮ ಸಿನಿಮಾ ಕ್ಷೇತ್ರದಲ್ಲಿ ಬಿರುದು ಅರ್ಥಪೂರ್ಣ ಆಗಿರುವುದಕ್ಕಿಂತ ‘ಪೊಗರು’ಸೂಚಕವಾಗಿರುವುದೇ ಹೆಚ್ಚು. ಆದರೆ ಕಾಶೀನಾಥುನಿ ವಿಶ್ವನಾಥ್ ಹೆಸರಿನ ಜೊತೆ ಬೆರೆತಿರುವ ‘ಕಲಾತಪಸ್ವಿ’ ಎಂಬ ವಿಶೇಷಣ ಮಾತ್ರ ನೂರಕ್ಕೆ ನೂರರಷ್ಟು ಒಪ್ಪುವಂತಹುದು.

ಚಲನಚಿತ್ರ ಮಾಧ್ಯಮವನ್ನು ಕಲೆ ಎಂದು ಪರಿಭಾವಿಸಿ ಆ ಕಲೆಯ ಸಿದ್ಧಿಗಾಗಿ ತಪಸ್ಸಿನಂತೆ ಧ್ಯಾನಿಸಿದವರು ವಿಶ್ವನಾಥ್. ಅಭಿರುಚಿ– ಮೌಲ್ಯಗಳ ವಿಚಾರದಲ್ಲಿ ಎಂಥ ಸಂದರ್ಭದಲ್ಲೂ ಎಳ್ಳಷ್ಟೂ